# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1027
ಉತ್ತರಿಸಬೇಕಾದ ದಿನಾಂಕ : 13.03.2020
ಸದಸ್ಯರ ಹೆಸರು : ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

| ಕ್ರಸ | ಪ್ರಶ್ನೆ | ಉತ್ತರ | Answer |
|---|---|---|---|
| ಅ) | ಬೀದರ್ ಜಿಲ್ಲೆಯಲ್ಲಿ ಹೊಸದಾಗಿ ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಬೀದರ್ ಜಿಲ್ಲೆಯ ಬೀದರ್ ನಲ್ಲಿ ಜಿಲ್ಲಾ ಕ್ರೀಡಾಂಗಣ, ಹುಮ್ನಾಬಾದ್, ಬಸವಕಲ್ಯಾಣ ಮತ್ತು ಔರಾದ್ ಗಳಲ್ಲಿ ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ಭಾಲ್ಕಿಯಲ್ಲಿ ತಾಲ್ಲೂಕು ಕ್ರೀಡಾಂಗಣವನ್ನು ನಿರ್ಮಿಸಲು ಸೂಕ್ತ ನಿವೇಶನ ಲಭ್ಯವಾಗಿರುವುದಿಲ್ಲ. ಹೊಸದಾಗಿ ರಚನೆಗೊಂಡಿರುವ ಚಿಟಗುಪ್ಪ, ಕಮಲನಗರ ಮತ್ತು ಹುಲ್ಸೂರುಗಳಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಿಸಲು ಸೂಕ್ತ ನಿವೇಶನ ಲಭ್ಯವಾಗಿರುವುದಿಲ್ಲ. ಈ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ರವರಿಗೆ ಕ್ರೀಡಾಂಗಣಗಳನ್ನು ನಿರ್ಮಿಸಲು ಸೂಕ್ತ ನಿವೇಶನ ಇಲ್ಲದಿರುವ ತಾಲ್ಲೂಕುಗಳಲ್ಲಿ ಸೂಕ್ತ ನಿವೇಶನವನ್ನು ಗುರುತಿಸಿ ಇಲಾಖೆಗೆ ಹಸ್ತಾಂತರಿಸುವಂತೆ ಕೋರಿ ಪತ್ರ ಬರೆಯಲಾಗಿದೆ. | Bidar District Stadium has been constructed in Bidar Town and Taluka Stadiums have been built in Humnabad, Basavakalyan and Aurad. Suitable land is not available for construction of Taluk stadium at Bhalki and suitable land has not been available so for, for the construction of Taluk Stadium in newly formed Chitaguppa, Kamalanagar and Hulsoor taluks. In this backdrop, a letter has been written to Deputy Commissioner, Bidar to identify and handover suitable land to the Department for the construction of Taluk Stadium wherever there is no stadiums. |
| ಆ) | 2016-17, 2017-18, 2018-19 ಹಾಗೂ 2019-20ನೇ ಸಾಲಿನಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; ಬಳಕೆ ಆಗಿರುವ ಅನುದಾನ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು) | 2017-18ನೇ ಸಾಲಿನಲ್ಲಿ ಬೀದರ್ ತಾಲ್ಲೂಕಿನ ಬೀದರ್ ನಗರದಲ್ಲಿರುವ ನೆಹರೂ ಜಿಲ್ಲಾ ಕ್ರೀಡಾಂಗಣದ ಗ್ಯಾಲರಿ ಪುನರ್ ನಿರ್ಮಾಣ ಹಾಗೂ ಪೆವಿಲಿಯನ್ ಕಟ್ಟಡದ ನವೀಕರಣ, ಆವರಣ ಗೋಡೆ ನಿರ್ಮಾಣ ಮತ್ತಿತರ ಕಾಮಗಾರಿಗಳನ್ನು ಒಟ್ಟು ರೂ 387.79 ಲಕ್ಷ ವೆಚ್ಚದಲ್ಲಿ ಕಲ್ಯಾಣ-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮದ ಮೂಲಕ ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿಯನ್ನು ದಿನಾಂಕ: 15-12-2017 ರಂದು ಆರಂಭಿಸಲಾಗಿದ್ದು, ಇದುವರೆಗೆ ರೂ 373.29 ಲಕ್ಷ ಬಿಡುಗಡೆ ಮಾಡಲಾಗಿದೆ. | In the year 2017-18, reconstruction of the viewers gallery, renovation of pavilion building, construction of compound wall and other works have been taken up in Nehru District Stadium Bidar, at a cost of Rs.387.79 lakhs by the Kalyana Karnataka regional Development Board through |

| | | | |
|---|---|---|---|
| | | 2019-20ನೇ ಸಾಲಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ರಾಜ್ಯ ವಲಯದ ಬಂಡವಾಳ ವೆಚ್ಚ ಕಾರ್ಯಕ್ರಮದಡಿ ಪ್ರಸಕ್ತ ಸಾಲಿನಲ್ಲಿ ರೂ 100.00 ಲಕ್ಷ ವೆಚ್ಚದಲ್ಲಿ ಹೆಚ್ಚುವರಿ ಪ್ರೇಕ್ಷಕರ ಗ್ಯಾಲರಿ ಹಾಗೂ ಇತರೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ರೂ 75.00 ಲಕ್ಷಗಳನ್ನು ಕರ್ನಾಟಕ ರಾಜ್ಯ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ ಇವರಿಗೆ ಬಿಡುಗಡೆ ಮಾಡಲಾಗಿದೆ.<br><br>2016-17 ಹಾಗೂ 2018-19 ಸಾಲಿನಲ್ಲಿ ಕ್ರೀಡಾಂಗಣಗಳ ನಿರ್ಮಾಣಕ್ಕೆ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ. | Karnataka Police Housing Corporation. The work has been commenced on 15.12.2017. So far an amount of Rs. 373.29 has been released.<br>During 2019-20 Department of Youth Empowerment and sports has taken up construction of the additional portion of the seating gallery and other works at a cost Rs. 100.00 lakhs and Rs.75.00 lakhs has been released to Karnataka Regional infrastructure Development Ltd.,<br>During 2016-17 and 2018-19 no funds released for the construction of any other Stadium. |
| ಇ) | ಬೀದರ್ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ನಿರ್ಮಿಸಲಾಗಿರುವ ಕ್ರೀಡಾಂಗಣಗಳ ಪೈಕಿ ಎಷ್ಟು ಚಾಲ್ತಿಯಲ್ಲಿವೆ; ಪ್ರತಿಯೊಂದಕ್ಕೂ ತಿಂಗಳವಾರು ಆಗಿರುವ ನಿರ್ವಹಣಾ ಖರ್ಚು-ವೆಚ್ಚ ಎಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು) | ಬೀದರ್ ಜಿಲ್ಲೆಯಲ್ಲಿ ಬಸವಕಲ್ಯಾಣ, ಹುಮ್ನಾಬಾದ, ಔರಾದ್ ಗಳಲ್ಲಿ ನಿರ್ಮಿಸಿರುವ ತಾಲ್ಲೂಕು ಕ್ರೀಡಾಂಗಣಗಳು, ಬೀದರ್ ಜಿಲ್ಲಾ ಕ್ರೀಡಾಂಗಣ, ಭಾಲ್ಕಿ ಒಳಾಂಗಣ ಕ್ರೀಡಾಂಗಣಗಳು ಸಾರ್ವಜನಿಕರ ಬಳಕೆಯಲ್ಲಿವೆ. 2019-20 ನೇ ಸಾಲಿನಲ್ಲಿ ತಿಂಗಳುವಾರು ಆಗಿರುವ ನಿರ್ವಹಣಾ ಖರ್ಚು-ವೆಚ್ಚದ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಿದೆ. | In Bidar district Taluka Stadium in Basavakalyan, Humnabad and Aurad, distrct stadium in Bidar and Indoor Hall in Bhalki are used by sports persons and Public. Details of the monthly maintenance expenses for the Year 2019-20 is provide in Annexure-1 |

**ವೈಎಸ್ ಡಿ-/ಇಬಿಬಿ/34/2020**

**(ಸಿ.ಟಿ.ರವಿ)**

**ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಹಾಗೂ**

**ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು**

ಅನುಬಂಧ-1

**<u>ಬೀದರ್ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿರುವ ಕ್ರೀಡಾಂಗಣಗಳ 2019-20 ನೇ ಸಾಲಿನ ತಿಂಗಳವಾರು ನಿರ್ವಹಣಾ ಖರ್ಚು-ವೆಚ್ಚದ ವಿವರ</u>**

(ರೂಗಳಲ್ಲಿ)

| ಕ್ರಸ | ತಾಲ್ಲೂಕು | ಏಪ್ರಿಲ್-2019 | ಮೇ-2019 | ಜೂನ್-2019 | ಜುಲೈ-2019 | ಆಗಸ್ಟ್-2019 | ಸೆಪ್ಟೆಂಬರ್-2019 | ಅಕ್ಟೋಬರ್-2019 | ನವೆಂಬರ್-2019 | ಡಿಸೆಂಬರ್-2019 | ಜನವರಿ-2020 | ಫೆಬ್ರವರಿ-2020 | ಒಟ್ಟು |
|---|---|---|---|---|---|---|---|---|---|---|---|---|---|
| 1 | ಬಸವ ಕಲ್ಯಾಣ ತಾಲ್ಲೂಕು ಕ್ರೀಡಾಂಗಣದ ನಿರ್ವಹಣೆ ವೆಚ್ಚ | 5000 | 11907 | 6758 | 6552 | 5000 | 5000 | 15325 | 6500 | 6982 | 5000 | 5000 | 79024 |
| 2 | ಹುಮನಾಬಾದ್ ತಾಲ್ಲೂಕು ಕ್ರೀಡಾಂಗಣದ ನಿರ್ವಹಣೆ ವೆಚ್ಚ | 5000 | 5000 | 5000 | 5000 | 5000 | 5000 | 5000 | 5000 | 5000 | 5000 | 29880 | 79880 |
| 3 | ಔರಾದ್ ತಾಲ್ಲೂಕು ಕ್ರೀಡಾಂಗಣದ ನಿರ್ವಹಣೆ ವೆಚ್ಚ | 5000 | 5000 | 5000 | 5000 | 5000 | 5000 | 5000 | 5000 | 5000 | 5000 | 5000 | 55000 |
| 4 | ಬೀದರ್ ತಾಲ್ಲೂಕಿನಲ್ಲಿರುವ ಬೀದರ್ ಜಿಲ್ಲಾ ಕ್ರೀಡಾಂಗಣ, ಒಳಾಂಗಣ ಕ್ರೀಡಾಂಗಣ ಹಾಗೂ ಈಜುಕೊಳಗಳ ನಿರ್ವಹಣೆ ವೆಚ್ಚ | 15000 | 21907 | 16758 | 16552 | 15000 | 15000 | 25325 | 16500 | 16982 | 15000 | 39880 | 213904 |
| 5 | ಭಾಲ್ಕಿ ತಾಲ್ಲೂಕು | ಭಾಲ್ಕಿ ತಾಲ್ಲೂಕು ಒಳಾಂಗಣ ಕ್ರೀಡಾ ಹಾಲ್ ನಿರ್ವಹಣೆಗೆ ಯಾವುದೇ ವೆಚ್ಚ ಭರಿಸಿರುವುದಿಲ್ಲ. | | | | | | | | | | | |
| | **ಒಟ್ಟು ವೆಚ್ಚ** | **30000** | **43814** | **33516** | **33104** | **30000** | **30000** | **50650** | **33000** | **33964** | **30000** | **79760** | **427808** |
| | | | | | | | | | | | | | |